ಉರ್ದುವಿನಲ್ಲಿ, ಘಟ್ಟದ ಕೆಳಗಿನವರು ತುಳುವಿನಲ್ಲಿ ಮಾತಾಡುವ ಸನ್ನಿವೇಶಗಳು ಇರುತ್ತಿದ್ದವು. ಆದರೆ ಬೇಂದ್ರೆಯವರು ಜನಪದ ಪರಂಪರೆಯ ಕವಿಯೂ ಬಹುಭಾಷಿಕ ಲೇಖಕರೂ ಆಗಿದ್ದರಿಂದ, ಅವರಿಗೆ ಸಂಕರಪಠ್ಯಗಳನ್ನು ರಚಿಸುವುದು ಕಷ್ಟವಾಗಲಿಲ್ಲ. ಅವರ 'ಪ್ರತಿಮಾತಾಯಿ' ಪದ್ಯವು ಕನ್ನಡ–ಮರಾಠಿ ಸಾಲುಗಳ ಮಿಶ್ರಣ. ಇದು ಮುಂಬೈನಲ್ಲಿ ಹುಟ್ಟಿದ ಮೊಮ್ಮಗಳಿಗಾಗಿ ರಚಿಸಿದ ಲಾಲಿಪದವಾಗಿದ್ದು, ಕರ್ನಾಟಕ–ಮಹಾರಾಷ್ಟ್ರಗಳ, ಕನ್ನಡ–ಮರಾಠಿಗಳ ನಡುವಣ ಜೈವಿಕ ಬಾಂಧವ್ಯವನ್ನು ಸೂಚಿಸುತ್ತದೆ. ಇಲ್ಲಿ ಕೂಸು ಏಕಕಾಲಕ್ಕೆ ಅಪ್ಪ ಅಮ್ಮನ ಭಾಷೆಗಳಿಗೆ ತೆರೆದುಕೊಂಡಿದೆ. ಎಳೆಯ ಮಕ್ಕಳು ದುರಭಿಮಾನವಿಲ್ಲದೆ ಪರಿಸರದಲ್ಲಿರುವ ಎಲ್ಲ ನುಡಿಗಳನ್ನು ಕಲಿಯುತ್ತವೆ. ಗಡಿತಂಟೆಯಲ್ಲಿ ತೊಡಗಿರುವ ಮಂದಿ ಮಕ್ಕಳಿಂದ ಈ ನುಡಿವಿವೇಕವನ್ನು ಪಡೆದುಕೊಳ್ಳಬೇಕಾಗಿದೆ ಎಂಬರ್ಥವೂ ಇಲ್ಲಿದ್ದಂತಿದೆ.

## ಶುದ್ಧೀಕರಣದ ವ್ಯಸನ

ಸಂಕರಭಾಷೆ ಮತ್ತು ನುಡಿಸಂಕರ ಪಠ್ಯಗಳನ್ನು ಚಾರಿತ್ರಿಕವಾಗಿ ಸಾಂಸ್ಕೃತಿಕವಾಗಿ ಅರಿಯಲಾಗದೆ, ಕಲಬೆರಕೆ ಎಂದು ಭಾವಿಸುವ ಧೋರಣೆ ಕೆಲವರಲ್ಲಿದೆ. ಇವರು ಬೀದರ ಕನ್ನಡದಲ್ಲಿರುವ ಉರ್ದು, ಮರಾಠಿ, ತೆಲುಗು ಶಬ್ದಗಳನ್ನು ತೆಗೆದು ಶುದ್ಧೀಕರಿಸಬೇಕೆಂದು ಹೇಳುವುದುಂಟು. ಇದಕ್ಕೂ ಊರು, ರೈಲು, ರಸ್ತೆ, ಚೌಕಗಳಿಗೆ ಇಡಲಾದ ನಿರ್ದಿಷ್ಟ ಧರ್ಮಕ್ಕೆ ಸೇರಿದ ಹೆಸರುಗಳನ್ನು ಬದಲಿಸುತ್ತಿರುವ ರಾಜಕಾರಣದ ಕಾರ್ಯಕ್ರಮಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ಕಾಡಿನ ಹಾಡಿಗಳಲ್ಲಿ ವಾಸಿಸುವ ಕಾರಣಕ್ಕೇ ಜೇನುಕುರುಬರು, ಇರುಳಿಗರು, ತೊದವರು, ಗೊಂಡರು, ಹಾಲಕ್ಕಿಯವರು ತಮ್ಮದೇ ಕನ್ನಡ ಹೊಂದಿದ್ದಾರೆ. ಮಂಡ್ಯ, ಬೀದರ್, ಕಲಬುರ್ಗಿ, ಕಾಸರಗೋಡು, ಕೆಜಿಎಫ್, ಬಳ್ಳಾರಿ, ಬೆಳಗಾವಿ, ಕಾರವಾರಗಳಲ್ಲಿ ಅವುಗಳಿಗಿರುವ ಭೌಗೋಳಿಕ ತಾವಿನಿಂದಲೇ ಕನ್ನಡದ ವಿಶಿಷ್ಟ ಚಹರೆಗಳು ಸಿದ್ಧಗೊಂಡಿವೆ. ಇವು ಕನ್ನಡವನ್ನು ಸಮೃದ್ಧಗೊಳಿಸಿವೆ. ಇವುಗಳಿಂದ ಕನ್ನಡೇತರ ಶಬ್ದಗಳನ್ನು ಹುಡುಕಿ ತೊಡೆವುದು ಸಾಧ್ಯವಿಲ್ಲ, ಅಗತ್ಯವೂ ಇಲ್ಲ. ಹಲವು ಭಾಷಿಕ ಜಾತಿಯ ಧಾರ್ಮಿಕ ಸಮುದಾಯಗಳು ಕೂಡುಬಾಳುವೆ ಮಾಡಿ ಸೃಷ್ಟಿಯಾದ ಕನ್ನಡಂಗಳಿವು. ಮಂಡ್ಯದ 'ಅ', 'ಹ'ಕಾರಗಳು ಅದಲು ಬದಲಾಗುವ ಮಂಡ್ಯದ ಕನ್ನಡವನ್ನು ಸಾಕಷ್ಟು ಗೇಲಿ ಮಾಡಲಾಗಿದೆ. ಇವ್ಯಾವೂ ದೋಷದ ಸಂಗತಿಯಲ್ಲ. ನಿರ್ದಿಷ್ಟ ರೂಪವನ್ನು ಶುದ್ಧವೆಂದು ಭಾವಿಸಿ, ಅದರ ಮಾದರಿಯನ್ನೇ ಎಲ್ಲೆಡೆ ಹುಡುಕುತ್ತ ಹೋದಾಗೆಲ್ಲ, ಕನ್ನಡದ ಬಹುರೂಪೀ ಚಹರೆಗಳು ನಿರಾಕರಣೆಗೆ ಒಳಗಾಗಿವೆ. ಏಕರೂಪೀ ಚಹರೆಯ ಅಪೇಕ್ಷೆಯು ಮೂಲಭೂತವಾಗಿ ಬದಲಾಗಿದೆ. ಪ್ರಭುತ್ವಗಳ ತಪ್ಪು ಭಾಷಾನೀತಿಗಳಿಂದ ಕನ್ನಡಕ್ಕಾಗುವ ಅನಾಹುತ, ಚಾರಿತ್ರಿಕ ಒತ್ತಡಗಳಿಂದ ಸಹಜವಾಗಿ ಸೃಷ್ಟಿಯಾಗಿರುವ ಇಂತಹ ಕನ್ನಡ ಚಹರೆಗಳಿಂದ ಸಂಭವಿಸುವುದಿಲ್ಲ.

## ಪ್ರಮಾಣೀಕರಣದ ಕಷ್ಟ

ಕನ್ನಡದಲ್ಲಿ ಪ್ರಾತಿನಿಧಿಕವಾದ ರೂಪವನ್ನು ತಿರುಳ್ಗನ್ನಡ, ಸುದ್ಧಗನ್ನಡ, ಪೊಸಗನ್ನಡ, ಶಿಷ್ಟಕನ್ನಡ, ಎಲ್ಲರ ಕನ್ನಡ, ಅಚ್ಚಗನ್ನಡ ಇತ್ಯಾದಿ ಪರಿಭಾಷೆಗಳ ಮೂಲಕ, ಹುಡುಕುವ ಯತ್ನಗಳು ನಡೆದುಬಂದಿವೆ. ಇವು ಭಾಷೆಗೆ ಪ್ರಮಾಣೀಕರಣ ಕೊಡುವ ಆಕ್ರಾಮಕ ಅಥವಾ ರಕ್ಷಣಾತ್ಮಕ ಯತ್ನಗಳು. ಕರ್ನಾಟಕದಲ್ಲಿ 'ಕನ್ನಡಂಗಳ್' ಇವೆಯೆಂದು ಹೇಳುವ ಮೂಲಕ ಭಾಷಿಕ ಚಹರೆಗಳ ಬಹುತ್ವವನ್ನು ಗುರುತಿಸಿದ ಮಾರ್ಗಕಾರನು, ಪುಲಿಗೆರೆ ಒಕ್ಕುಂದ ಕಿಸುವೊಳಲ್ ಕೊಪಣನಗರಗಳ ನಡುವಣ ಕನ್ನಡವನ್ನು 'ತಿರುಳ್ಗನ್ನಡ'ವೆಂದು ಮಾನ್ಯಮಾಡಿದನು. ಈ ಮೂಲಕ ಉಳಿದ ಕನ್ನಡದ ಚಹರೆಗಳನ್ನು ಅನಧಿಕೃತಗೊಳಿಸಿದನು. ಪರಧರ್ಮವನ್ನೂ ಪರರ ವಿಚಾರಗಳನ್ನು ಸಹಿಸುವುದೇ ಚಿನ್ನವೆಂದು ಹೇಳಿದವನೇ, ಭಾಷೆಯ ವಿಷಯದಲ್ಲಿ ಒಂದು ಚಹರೆಯನ್ನು ಅಧಿಕೃತಗೊಳಿಸುವುದು ಒಂದು ವೈರುಧ್ಯ. ಆದರೆ ರಾಜಮಾರ್ಗದ ಪ್ರತಿಪಾದಕನಾದ ಆತನಿಗೆ, ಪ್ರಭುತ್ವಕ್ಕೆ ಪ್ರಮಾಣೀಕರಣದ ಕನ್ನಡವನ್ನು ವ್ಯಾಖ್ಯಾನಿಸಿ ಕೊಡುವ ಒತ್ತಡವಿತ್ತು. ಸೃಜನಶೀಲ ಬರಹಕ್ಕೆ ಭಾಷಿಕ ಬಹುತ್ವವು ವರವಾದರೆ, ಆಡಳಿತಕ್ಕೆ ಸಮಸ್ಯೆ. ಮುಮ್ಮಡಿಯವರಿಂದ ಅಧಿಕಾರ ಕಿತ್ತುಕೊಂಡ (1931) ಬ್ರಿಟಿಷರು, ಮಾರ್ಕ್